# ಕರ್ನಾಟಕದ ಏಕೀಕರಣ ಹೋರಾಟ – ಒಂದು ಅವಲೋಕನ

ಭೀಮನಗೌಡ ಶಿಂಗ್ನಳ್ಳಿ
ಸಹಾಯಕ ಪ್ರಾಧ್ಯಾಪಕ, ಇತಿಹಾಸ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಹುನಗುಂದ, ಬಾಗಲಕೋಟೆ.

DOI: https://doi.org/10.5281/zenodo.18008993

## ABSTRACT:

ಸ್ವಾತಂತ್ರ್ಯದ ನಂತರ ಕನ್ನಡ ಭಾಷಾಭಿಮಾನ ಮತ್ತು ಸಾಂಸ್ಕೃತಿಕ ಏಕತೆಯ ಆಧಾರವಾಗಿ ರಾಜ್ಯಗಳ ಪುನರ್‌ರಚನೆಯ ಬೇಡಿಕೆ ಬಲವಾಯಿತು. ಆಲೂರು ವೆಂಕಟರಾಯರಂತಹ ನಾಯಕರು "ಏಕೀಕೃತ ಕರ್ನಾಟಕ"ದ ಪರವಾಗಿ ಚಳವಳಿಯನ್ನು ಮುನ್ನಡೆಸಿದರು. ಇದರ ಫಲವಾಗಿ 1956ರ ರಾಜ್ಯಗಳ ಪುನರ್‌ರಚನಾ ಕಾಯ್ದೆಯ ಮೂಲಕ ವಿವಿಧ ಪ್ರದೇಶಗಳನ್ನು ಒಂದಾಗಿ ಸೇರಿಸಿ ಮೈಸೂರು ರಾಜ್ಯ ರಚಿಸಲಾಯಿತು; ನಂತರ 1973ರಲ್ಲಿ ಇದಕ್ಕೆ ಕರ್ನಾಟಕ ಎಂಬ ಹೆಸರು ನೀಡಲಾಯಿತು. ಈ ರೀತಿಯಾಗಿ, ಭಾರತದ ಸ್ವಾತಂತ್ರ್ಯ ಹೋರಾಟವು ರಾಜಕೀಯ ಮುಕ್ತಿಗೆ ದಾರಿ ಮಾಡಿಕೊಟ್ಟರೆ, ಕರ್ನಾಟಕದ ಏಕೀಕರಣವು ಭಾಷಾ–ಸಾಂಸ್ಕೃತಿಕ ಗುರುತಿನ ಆಧಾರದಲ್ಲಿ ರಾಜ್ಯ ನಿರ್ಮಾಣಕ್ಕೆ ಕಾರಣವಾಯಿತು. ಎರಡೂ ಚಳವಳಿಗಳು ಜನ ಏಕತೆ, ತ್ಯಾಗ ಮತ್ತು ರಾಷ್ಟ್ರೀಯ ಚೇತನೆಯ ಮಹತ್ವವನ್ನು ಪ್ರತಿಬಿಂಬಿಸುತ್ತವೆ.

## KEYWORDS:

ಮೈಸೂರು ಸಂಸ್ಥಾನ, ಬಾಂಬೆ ಪ್ರೆಸಿಡೆನ್ಸಿ, ಮದ್ರಾಸ್ ಪ್ರೆಸಿಡೆನ್ಸಿ, ಹೈದರಾಬಾದ್ ರಾಜ್ಯ, ಏಕೀಕೃತ ಕರ್ನಾಟಕ, ರಾಜ್ಯಗಳ ಪುನರ್‌ರಚನಾ ಕಾಯ್ದೆ.

**ಪ್ರಸ್ತಾವನೆ:**

ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರು 1905–1920 ರವರೆಗೆ ಎರಡು ಕನಸುಗಳನ್ನು ಕಂಡರು. ಅವುಗಳೆಂದರೆ, ಒಂದು ಭಾರತದ ಸ್ವಾತಂತ್ರ್ಯ, ಇನ್ನೊಂದು ಕರ್ನಾಟಕದ ಏಕೀಕರಣ. ಭಾರತ ಮತ್ತು ಭಾರತದ ಭಾಗವಾಗಿರುವ ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ ನಡೆಯುತ್ತಿರುವ ಸಂದರ್ಭದಲ್ಲಿಯೇ ಕರ್ನಾಟಕ ಮತ್ತು ಇತರೇ ಪ್ರದೇಶಗಳಲ್ಲೂ (ಬಂಗಾಳ, ಒರಿಸ್ಸಾ, ಆಂಧ್ರ, ಮಹಾರಾಷ್ಟ್ರ) ಇನ್ನೊಂದು ಚಳುವಳಿ ನಡೆಯಿತು. ಆ ಚಳುವಳಿಯೇ ಏಕೀಕರಣ ಚಳುವಳಿ. ಒಂದೇ ಭಾಷೆಯನ್ನಾಡುವ ಜನರನ್ನು ಏಕ ಆಡಳಿತದ ಘಟಕದ ಅಧೀನಕ್ಕೆ ಒಳಪಡಿಸಬೇಕು ಮತ್ತು ಒಂದೇ ರೀತಿಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವ ಜನರನ್ನು ಒಂದೆಡೆ ಸೇರಿಸಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡು ಈ ಚಳುವಳಿ ಘಟಿಸಿತು.

**ಏಕೀಕರಣ ಪೂರ್ವದ ಕರ್ನಾಟಕದ ಪ್ರಾದೇಶಿಕ ಸ್ಥಿತಿ:**

ಆಂಗ್ಲರ ಆಡಳಿತದ ತೆಕ್ಕೆಗೆ ಕರ್ನಾಟಕ ತುತ್ತಾದಾಗ (4ನೇ ಆಂಗ್ಲೋ–ಮೈಸೂರು ಯುದ್ಧದ ತರುವಾಯ) ಕನ್ನಡ ನಾಡು ಮೈಸೂರು ಸಂಸ್ಥಾನ, ಹೈದರಾಬಾದ್ ಸಂಸ್ಥಾನ, ಮುಂಬೈ (ಬಾಂಬೆ) ಕರ್ನಾಟಕ, ಮದ್ರಾಸ್ ಕರ್ನಾಟಕ, ಕೊಡಗು ಪ್ರೆಸಿಡೆನ್ಸಿಗಳೆಂದು ಐದು ಭಾಗಗಳಾಗಿಯೂ, ಉಳಿದಂತೆ ಸ್ಥಳೀಯವಾಗಿ 22 ಚಿಕ್ಕ ಸಂಸ್ಥಾನಗಳಾಗಿ ಕನ್ನಡ ಪ್ರದೇಶಗಳು ಛಿದ್ರಛಿದ್ರವಾಗಿದ್ದವು. ಭಾಷಾ ದೃಷ್ಟಿಯಿಂದ ಗಮನಿಸಿದರೆ ಹೈದರಾಬಾದ್ ಸಂಸ್ಥಾನದ ಜನರ ಮೇಲೆ ಉರ್ದು ಭಾಷೆಯ ಪ್ರಭಾವ, ಮುಂಬೈ ಕರ್ನಾಟಕ ಜನರ ಮೇಲೆ ಮರಾಠಿ ಪ್ರಭಾವ,

ಮದ್ರಾಸ್, ಕೊಡಗು ಭಾಗದಲ್ಲಿ ಆಂಗ್ಲ ಭಾಷೆಯ ಪ್ರಭಾವ, ಕೇವಲ ಮೈಸೂರು ಭಾಗದ ಒಂಬತ್ತು ಜಿಲ್ಲೆಗಳಲ್ಲಿ ಮಾತ್ರ ಕನ್ನಡ ಭಾಷೆ ಎದ್ದು ಕಾಣುತ್ತಿತ್ತು. ಕ್ರಿ. ಶ. 1917ರಲ್ಲಿ ಕರ್ನಾಟಕ ಮತ್ತು ಕನ್ನಡ ಭಾಷೆಯ ದುಸ್ಥಿತಿಯನ್ನು ಕುರಿತು ಆಲೂರು ವೆಂಕಟರಾಯರು: "ಛೇ, ಕರ್ನಾಟಕವೆಲ್ಲಿದೆ? ನಾಲ್ಕಾರು ಕಡೆ ಹರಿದು ಹಂಚಿಹೋಗಿರುವ ಕರ್ನಾಟಕವನ್ನು ಹೊಲಿದು ಅಖಂಡವಾಗಿ ಮಾಡುವವರು ಯಾರು? ಅಷ್ಟೊಂದು ಅಭಿಮಾನವು ನಮ್ಮಲ್ಲಿ ಎಲ್ಲುಂಟು" ಎಂದು ತಮ್ಮ ಅಳಲನ್ನು ವ್ಯಕ್ತಪಡಿಸಿದರೆ, ಡಾ. ಎಂ. ವಿ. ಕೃಷ್ಣರಾಯರು "ದಕ್ಷಿಣ ಭಾರತದ ಬಹು ಭಾಗವನ್ನೆಲ್ಲ ವ್ಯಾಪಿಸಿ ಉತ್ತರ ಭಾರತದ ನಾನಾ ಭಾಗಗಳಲ್ಲಿ ತನ್ನ ಪ್ರಭಾವವನ್ನು ಬೀರಿದ ಕರ್ನಾಟಕ ಈಗ ಒಡೆದು ಚೂರು ಚೂರಾಗಿದೆ, ಕರ್ನಾಟಕದ ಅಸ್ತಿತ್ವವೇ ಅಳಿಸಿಹೋದಂತಾಗಿದೆ. ಒಟ್ಟಿನಲ್ಲಿ ಕನ್ನಡಿಗರಿಗೆ ಕರ್ನಾಟಕದ ಪ್ರಜ್ಞೆಯೇ ಇಲ್ಲದಂತಾಗಿದೆ" ಎನ್ನುವ ಅಂಶವನ್ನು ಹೊರಹಾಕಿದರು.

**ಏಕೀಕರಣ ಹೋರಾಟಕ್ಕೆ ಪ್ರೇರಕವಾದ ಅಂಶಗಳು:**

**ವೃತ್ತ ಪತ್ರಿಕೆಗಳ ಪ್ರಭಾವ:**

19ನೇ ಶತಮಾನದ ಮಧ್ಯಭಾಗದ ವೇಳೆಗೆ ಪ್ರಜ್ಞಾವಂತರಾದ ಕೆಲ ಕನ್ನಡಿಗರು ಕನ್ನಡ ಭಾಷೆ, ಪ್ರಾದೇಶಿಕತೆ ಸ್ಥಿತಿಯನ್ನು ಜನರಿಗೆ ಅರ್ಥವಾಗುವಂತೆ ಮಾಡಿ ಛಿದ್ರವಾಗಿರುವ ನಾಡನ್ನು ಒಂದಾಗಿಸುವುದಕ್ಕೆ ಜಾಗೃತಿ ಮೂಡಿಸುವ ಕಾರ್ಯವನ್ನು ವೃತ್ತ ಪತ್ರಿಕೆಗಳ ಮೂಲಕ ಮಾಡಿದರು. ಅಂತಹ ಕೆಲವು ಪತ್ರಿಕೆಗಳೆಂದರೆ– ಕರ್ನಾಟಕ ಪ್ರಕಾಶಿಕ [ಬೆಂಗಳೂರಿನಿಂದ 1865ರಲ್ಲಿ ಪಾಕ್ಷಿಕವಾಗಿ ಪ್ರಕಟವಾಗುತ್ತಿತ್ತು. ಆದರೆ ರಾಜದ್ರೋಹದ ಆಪಾದನೆಯ ಮೇಲೆ ಅದನ್ನು ರದ್ದು ಪಡಿಸಲಾಯಿತು. 1872–73ರಲ್ಲಿ ಪುನಃ ಆರಂಭವಾಗಿ ಮತ್ತೆ ನಿಂತುಹೋಯಿತು], ಮೈಸೂರು ಸ್ಟಾರ್, ಮೈಸೂರು ಸ್ಟ್ಯಾಂಡರ್ಡ್, ದೇಶಾಭಿಮಾನ, ಬೆಂಗಳೂರು ಪ್ರಜಾಮತ, ತಾಯಿನಾಡು, ವೀರಕೇಸರಿ, ವಿಶ್ವ ಕರ್ನಾಟಕ, ರಾಜಹಂಸ (ಧಾರವಾಡದಿಂದ – 1881), ಕರ್ನಾಟಕ ವೃತ್ತ (ಫಕೀರಪ್ಪ ಅನಾಡ), – 1890 (ಧಾರವಾಡದಿಂದ) ವಿಜಯ (ಧಾರವಾಡದಿಂದ), ಸ್ವದೇಶಾಭಿಮಾನಿ (ಮಂಗಳೂರು – 1907), ವೃತ್ತಾಂತ ಚಿಂತಾಮಣಿ (ಮೈಸೂರು – 1885), ಕನ್ನಡಿಗ (ಮಂಗಳವೇಡೆ ಶ್ರೀನಿವಾಸರಾಯರು), ಜ್ಞಾನಬೋಧಕ ಮತ್ತು ಕರ್ನಾಟಕ ಪತ್ರ (ಶ್ರೀ ವೆಂಕಟ ರಂಗೋ ಕಟ್ಟಿ), ಚಂದ್ರೋದಯ (ಹುಚ್ಚಯ್ಯ ವಿಭೂತಿ), ಕನ್ನಡ ನುಡಿ (ಕನ್ನಡ ಸಾಹಿತ್ಯ ಪರಿಷತ್ತು), ಪ್ರಬುದ್ಧ ಕರ್ನಾಟಕ (ಮೈಸೂರು ವಿಶ್ವವಿದ್ಯಾಲಯ), ಕರ್ಮವೀರ, ಸಂಯುಕ್ತ ಕರ್ನಾಟಕ, ಸ್ವತಂತ್ರ ಕರ್ನಾಟಕ ಮುಂತಾದ ಪತ್ರಿಕೆಗಳು ಬ್ರಿಟಿಷ್ ಸರಕಾರದ ದೌರ್ಜನ್ಯ ಮತ್ತು ಧೋರಣೆಗಳನ್ನು ಟೀಕಿಸಿ, ಏಕೀಕರಣದ ಮಹತ್ವ ಸಾರಿದವು. ಮೈಸೂರು ಸರಕಾರ 1909ರಲ್ಲಿ ಪತ್ರಿಕಾ ನಿರ್ಬಂಧದ ಕಾಯ್ದೆಯನ್ನು ಜಾರಿಗೊಳಿಸಿದ್ದರಿಂದ ಹಲವು ಪತ್ರಿಕೆಗಳು ತಮ್ಮ ಪ್ರಕಟಣೆಗಳನ್ನು ನಿಲ್ಲಿಸಬೇಕಾಯಿತು.

**ಸಂಘ ಸಂಸ್ಥೆಗಳು (ಸಂಘಟನೆಗಳು):**

ಕರ್ನಾಟಕ ಭಾಷೋಜ್ಜೀವಿನಿ ಸಭಾ (ಮೈಸೂರಿನಿಂದ) ಮತ್ತು ಕರ್ನಾಟಕ ವಿದ್ಯಾವರ್ಧಕ ಸಂಘ (1890ರಲ್ಲಿ ರಾ. ಹ. ದೇಶಪಾಂಡೆ ಮತ್ತು ಸಂಗಡಿಗರಿಂದ ಧಾರವಾಡದಲ್ಲಿ ಸ್ಥಾಪಿಸಲ್ಪಟ್ಟಿತು) ಎನ್ನುವ ಸಂಸ್ಥೆಗಳು ಹಾಗೂ ರಾಜಕೀಯ ಪಕ್ಷಗಳಾಗಿದ್ದ ಪ್ರಜಾಪಕ್ಷ, ಪ್ರಜಾಮಿತ್ರ ಮಂಡಳಿಗಳು ನಾಡು ನುಡಿಯ ರಕ್ಷಣೆಗೆ ಪಣತೊಟ್ಟು ನಿಂತವು.

**ಪಾಶ್ಚಿಮಾತ್ಯ ಶಿಕ್ಷಣ (ಜ್ಞಾನ) ಮತ್ತು ಬರವಣಿಗೆಗಳು:**

ವಸಾಹತುಶಾಹಿಗಳು ಭಾರತೀಯರಿಗೆ ಪಾಶ್ಚಿಮಾತ್ಯ ಶಿಕ್ಷಣದ ಬಾಗಿಲನ್ನು

ತೆರೆಯುವ ಕಾರ್ಯವನ್ನು ಮಾಡಿತು. ಇದರಿಂದ, ಹೊಸ ರೀತಿಯ ತಾರ್ಕಿಕ ಪ್ರಜ್ಞೆ ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳುವ ಮಟ್ಟಕ್ಕೆ ಜನತೆ ತಲುಪಿದರು. ಸಾಹಿತ್ಯ ದಿಗ್ಗಜರು ತಮ್ಮ ಕೃತಿಗಳು ಮತ್ತು ಕವನ ಕಾವ್ಯಗಳ ಮೂಲಕ ಜನರಲ್ಲಿ ರಾಷ್ಟ್ರಾಭಿಮಾನ ಮೊಳಗಿಸಿದರು. ಉದಾ : ಆಲೂರು ವೆಂಕಟರಾವ್, ಹಳಕಟ್ಟಿ, ಮುದವೀಡು ಕೃಷ್ಣರಾವ್, ಬೆನಗಲ್ ರಾಮರಾವ್, ತಮ್ಮಣ್ಣ ಚಿಕ್ಕೋಡಿ, ಆರ್. ನರಸಿಂಹಾಚಾರ್, ಬಿ. ಎಂ. ಶ್ರೀಕಂಠಯ್ಯ, ದ. ರಾ. ಬೇಂದ್ರೆ, ಶಂ. ಬಾ. ಜೋಷಿ, ಅ.ನ. ಕೃಷ್ಣರಾವ್, ತಿ. ತಾ. ಶರ್ಮಾ, ಗೋವಿಂದ ಪೈ, ವಿ. ಕೃ. ಗೋಕಾಕ್, ಬೆಟಗೇರಿ ಕೃಷ್ಣಶರ್ಮ, ಶ್ರೀರಂಗ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬಿ. ಶಿವಮೂರ್ತಿ ಸ್ವಾಮಿ, ಕುವೆಂಪು (ಜೈ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ ಭಾರತದೊಳಗೆ ಕರ್ನಾಟಕದ ಏಕೀಕರಣವಾಗಬೇಕು ಎನ್ನುವ ಅಂಶವನ್ನು ಮನವರಿಕೆ ಮಾಡಿಕೊಟ್ಟರು) ಮತ್ತು (ಬಾರಿಸು ಕನ್ನಡ ಡಿಂಡಿಮವ; ಓ ಕರ್ನಾಟಕ ಹೃದಯ ಶಿವ, ಕಚ್ಚಾಡುವರನು ಕೂಡಿಸಿ ಒಲಿಸು; ಒಟ್ಟಿಗೆ ಬಾಳುವ ತೆರದಲಿ ಹರಿಸು ಈ ಗೀತೆಯ ಮೂಲಕ ಕನ್ನಡಿಗರ ಅಭಿಮಾನ ಶೂನ್ಯತೆಯನ್ನು ಬಡಿದೆಬ್ಬಿಸಿದರು), ಶಿವರಾಮ ಕಾರಂತ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಆರ್. ಆರ್. ದಿವಾಕರ್, ಜಿ. ಪಿ. ರಾಜರತ್ನಂ, ಎಫ್. ಕಿಟ್ಟೆಲ್, ಥಾಮಸ್ ಮನ್ರೊ, ಮಾಗ್ಲಿಂಗ್ ಜೆಗ್ಲರ್, ಮೆಕೆಂಜಿ, ಗಂಗಾಧರ ಮಡಿವಾಳೇಶ್ವರ ತುರಮುರಿ, ರಾ. ಹ. ದೇಶಪಾಂಡೆ, ಇನ್ನೂ ಮುಂತಾದವರ ಪಾತ್ರ ಅತ್ಯಮೂಲ್ಯವಾದುದು. ಅದೇ ರೀತಿ ರಾಬರ್ಟ್ ಸೀವೆಲ್, ಜೆ. ಎಫ್. ಫ್ಲೀಟ್ ಮತ್ತು ಮಾರ್ಕ್ ವಿಲ್ಕ್ ರವರ ಬರವಣಿಗೆಗಳು ವಿದ್ಯಾವಂತ ವರ್ಗದಲ್ಲಿ ಉತ್ಸಾಹವನ್ನು ತುಂಬಿದವು. ಬಿ. ಎಲ್. ರೈಸ್ ಮತ್ತು ಡೆಪ್ಯುಟಿ ಚೆನ್ನಬಸಪ್ಪನವರಂಥ ವ್ಯಕ್ತಿಗಳ ಪ್ರಯತ್ನದ ಫಲವಾಗಿ ಕನ್ನಡ ಮತ್ತು ಇಂಗ್ಲಿಷ್ ಶಿಕ್ಷಣ ವ್ಯಾಪಕವಾಗಿ ಬೆಳವಣಿಗೆಯಾಯಿತು. ಆ ಮೂಲಕ ಜನರಲ್ಲಿ ರಾಷ್ಟ್ರೀಯ ಮನೋಭಾವ ಹುಟ್ಟನ್ನು ಕಂಡುಕೊಂಡಿತು.

**ಬಾಲಗಂಗಾಧರ ತಿಲಕ್ ಮತ್ತು ಗಾಂಧೀಜಿಯವರ ಭಾವನೆಗಳು:**

ತಿಲಕರು ಆಡಳಿತ ವಿಕೇಂದ್ರೀಕರಣವನ್ನು ಕುರಿತು ಪರಿಶೀಲಿಸಲು ನೇಮಕವಾದ ರಾಯಲ್ ಕಮಿಷನ್‌ಗೆ ಸಾಕ್ಷಿಯನ್ನು ನೀಡುವ ಸಂದರ್ಭದಲ್ಲಿ ಭಾಷೆ ಮತ್ತು ವಂಶವನ್ನು ಆಧರಿಸಿ ಪ್ರಾಂತ್ಯಗಳನ್ನು ಪುನರ್ ರಚಿಸಬೇಕು ಎನ್ನುವ ವಾದವನ್ನು ಮಂಡಿಸಿದ್ದರು ಮತ್ತು ಗಾಂಧೀಜಿಯವರು ಭಾಷೆಯ ಆಧಾರದ ಮೇಲೆ ಪ್ರಾಂತೀಯ ಕಾಂಗ್ರೆಸ್ ಸಮಿತಿಗಳನ್ನು ರಚಿಸಬೇಕು ಎನ್ನುವ ಭಾವನೆಯನ್ನು ಹೇಳಿದ್ದರು. ಭಾಷಾವಾರು ಪ್ರಾಂತ್ಯ ರಚನೆಯ ವಿಚಾರ ಸೇರ್ಪಡೆಗೊಳ್ಳುವಂತೆ ಮಾಡಿದರು. ಇದು ಸಹಜವಾಗಿಯೇ ಏಕೀಕರಣ ಪ್ರಕ್ರಿಯೆಗೆ ಪ್ರೇರಣೆಯನ್ನು ನೀಡಿತು. 1920ರ ನಾಗಪುರ ಅಧಿವೇಶನ ಭಾಷಾವಾರು ಪ್ರಾಂತ್ಯ ರಚನೆಯ ತತ್ವವನ್ನು ಒಪ್ಪಿಕೊಂಡಿತು. ಅಲ್ಲದೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಭಾಷಾವಾರು ಪ್ರಾಂತೀಯ ಸಮಿತಿಗಳು ಅಧಿಕೃತವೆಂದು ಸಾರಿತು. ಇದರಿಂದ, ಕನ್ನಡ ಮಾತನಾಡುವ ಪ್ರದೇಶಗಳ ಜನರನ್ನು ಪ್ರತಿನಿಧಿಸುವ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಹುಟ್ಟನ್ನು ಕಂಡುಕೊಂಡಿತು.

**ಲಿಯೋನೆಲ್ ಕರ್ಟಿಸ್ ಚಟುವಟಿಕೆಗಳು:**

ಬ್ರಿಟಿಷ್ ಪಾರ್ಲಿಮೆಂಟ್‌ನ ಸದಸ್ಯನಾಗಿದ್ದ ಲಿಯೋನೆಲ್ ಕರ್ಟಿಸ್ (ಸರಕಾರ ಭಾರತದ ಸಂಯುಕ್ತ ರಾಜ್ಯ ಸಂಘ – A United States of India within the British Commonwealth – ವನ್ನು ಹುಟ್ಟುಹಾಕುವುದಾದ ಪಕ್ಷದಲ್ಲಿ) "ಸಿಂಧಿಗಳಿಗೆ,

ಕನ್ನಡ ಭಾಷಿಕರಿಗೆ, ಒರಿಯಾ ಭಾಷಿಕರಿಗೆ ಮತ್ತು ಇತರರಿಗೆ ಮಾಡಿರುವ ಅನ್ಯಾಯವನ್ನು ಸರಿಪಡಿಸಲೇಬೇಕು" ಎನ್ನುವ ವಾದವನ್ನು ಮಂಡಿಸಿದನು. ಇದಕ್ಕೆ ಜನಾಂಗ, ಧರ್ಮ ಮತ್ತು ಭಾಷೆ ನೆಲೆಗಟ್ಟಾಗಬೇಕು. ಇದರಿಂದ ಆಂತರಿಕವಾಗಿ ಶಾಂತಿ- ಸೌಹಾರ್ದತೆ ನೆಲೆಗೊಳ್ಳುತ್ತದೆ ಎನ್ನುವ ವಿಚಾರವನ್ನು ಪ್ರತಿಪಾದಿಸಿದನು.

**ಧರ್ಮಪ್ರಚಾರಕರ/ಮಿಷನರಿಗಳ ಪಾತ್ರ:**

ಧರ್ಮ ಪ್ರಚಾರ ಮತ್ತು ಮತಾಂತರ ಕಾರ್ಯಗಳಿಗೆ ಹಲವು ಯುರೋಪಿಯನ್ ಧರ್ಮಪ್ರಚಾರಕರು ಕನ್ನಡ ನಾಡಿಗೆ ಆಗಮಿಸಿದರು. ಅವರುಗಳು ಧರ್ಮ ಪ್ರಚಾರದ ಜೊತೆಜೊತೆಗೆ ಶಾಲೆಗಳನ್ನು ಆರಂಭಿಸಿ ಕನ್ನಡ ಭಾಷೆಯಲ್ಲಿ ಪಾಠ ಪ್ರವಚನವನ್ನು ನೀಡಲು ಆರಂಭಿಸಿದರು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕನ್ನಡದಲ್ಲಿ ಪಠ್ಯಪುಸ್ತಕಗಳನ್ನು ಮುದ್ರಿಸಲಾರಂಭಿಸಿದರು. ಈ ರೀತಿಯ ಪ್ರಕ್ರಿಯೆ ಕನ್ನಡಿಗರ ಮೇಲೆ ಸಹಜವಾಗಿಯೇ ಪರಿಣಾಮವನ್ನು ಬೀರಿತು. ಆಗ ಕನ್ನಡಿಗರಾಗಿದ್ದ ಗಂಗಾಧರ ಮಡಿವಾಳೇಶ್ವರ, ರಾ. ಹ. ದೇಶಪಾಂಡೆ, ಶ್ಯಾಮರಾವ್ ವಿಠಲ್, ಇನ್ನೂ ಮುಂತಾದವರು ಶಾಲೆಗಳಲ್ಲಿ ಕನ್ನಡದ ವಾತಾವರಣವನ್ನು ನಿರ್ಮಾಣ ಮಾಡಿದ್ದಲ್ಲದೆ, ಕನ್ನಡದಲ್ಲಿ ಅನೇಕ ಪಠ್ಯ ಪುಸ್ತಕಗಳನ್ನು ಬರೆದರು. ಅದೇ ರೀತಿ ಡೆಪ್ಯುಟಿ ಚನ್ನಬಸಪ್ಪ, ಸನಾದಿ ಅಣ್ಣಾರಾವ್, ವೆಂಕಟರಂಗೋ ಕಟ್ಟಿ, ಇನ್ನೂ ಮುಂತಾದವರು ಸೇರಿಕೊಂಡು ಮುದ್ರಣಾಲಯವನ್ನೇ ತೆರೆದರು. ಈ ರೀತಿಯ ಚಟುವಟಿಕೆಗಳು ಸಹಜವಾಗಿಯೇ ಕರ್ನಾಟಕದಲ್ಲಿ ಏಕೀಕರಣ ಚಳುವಳಿಗೆ ಪ್ರೇರಣೆಯನ್ನು ನೀಡಿದವು.

**ಡೆಪ್ಯುಟಿ ಚನ್ನಬಸಪ್ಪ ಮತ್ತು ಇತರರು:**

ಕರ್ನಾಟಕ ಹರಿದುಹಂಚಿ ಹೋಗಿದ್ದರಿಂದ ಕನ್ನಡಿಗರು ಶೋಷಣೆಗೆ ತುತ್ತಾಗಿದ್ದೇವೆ ಎನ್ನುವುದನ್ನು ಮನವರಿಕೆ ಮಾಡಿಕೊಂಡ ನಂತರ ಕರ್ನಾಟಕದ ಏಕೀಕರಣ ಚಳುವಳಿಗೆ ಒಂದು ಸ್ಪಷ್ಟ ರೂಪ ಬರಲಾರಂಭಿಸಿತು. ಬಾಂಬೆ ಕರ್ನಾಟಕದವರಾಗಿದ್ದ ಡೆಪ್ಯುಟಿ ಚನ್ನಬಸಪ್ಪ (ಶಿಕ್ಷಣ ಇಲಾಖೆಯ ಅಧಿಕಾರಿಯಾಗಿದ್ದರು) ಮತ್ತು ವೆಂಕಟರಂಗೋಕಟ್ಟಿ, ಬಾಂಬೆ ಕರ್ನಾಟಕದಲ್ಲಿ ಕನ್ನಡ ಮಾಧ್ಯಮದ ಶಾಲೆಗಳನ್ನು ಆರಂಭಿಸಬೇಕು ಎನ್ನುವ ಪ್ರಯತ್ನದಿಂದ ಏಕೀಕರಣ ಪ್ರಕ್ರಿಯೆ ಆರಂಭವಾಯಿತು.

**ಸಂಘ ಸಂಸ್ಥೆಗಳು:**

ಕರ್ನಾಟಕ ವಿದ್ಯಾವರ್ಧಕ ಸಂಘ, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ (ಧಾರವಾಡ), ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಂಘ (ಸೆಂಟ್ರಲ್ ಕಾಲೇಜ್, ಬೆಂಗಳೂರು), ಕರ್ನಾಟಕ ಸಂಘ (ಬೆಂಗಳೂರು), ಕರ್ನಾಟಕ ಸಂಘಗಳು (ಸುರಪುರ ಬಳಿ ರಂಗಂಪೇಟೆ, ರಾಯಚೂರು, ಕಿತ್ತೂರು, ಇನ್ನೂ ಮುಂತಾದ ಪ್ರದೇಶಗಳು) ನಾಡು-ನುಡಿಗಳ ಜಾಗೃತಿಗೋಸ್ಕರ ದುಡಿದವು.

ಕರ್ನಾಟಕ ವಿದ್ಯಾವರ್ಧಕ ಸಂಘ - 1890 (ಧಾರವಾಡ): ರಾ. ಹ. ದೇಶಪಾಂಡೆ (ಕಾರ್ಯದರ್ಶಿ) ಯವರು ಈ ಸಂಘಟನೆಯನ್ನು ಆರಂಭಿಸಿದರು. ಈ ಸಂಘ ಏಕೀಕರಣದ ಸಮಸ್ಯೆಯನ್ನು ಚರ್ಚಿಸಲು ಒಂದು ವೇದಿಕೆಯಾಗಿ ಪರಿವರ್ತಿತವಾಯಿತು. ಸಭೆ ಸಮಾರಂಭಗಳನ್ನು ನಡೆಸುತ್ತಾ ಕನ್ನಡ ಸಂಸ್ಕೃತಿ, ಕನ್ನಡ ಚರಿತ್ರೆ ಮತ್ತು ಕನ್ನಡ ಭಾಷೆಗಳ ಬಗ್ಗೆ ಅರಿವನ್ನು ಮೂಡಿಸುವ ಕೆಲಸವನ್ನು ಮಾಡಲಾಯಿತು. ಕರ್ನಾಟಕ ವಿದ್ಯಾವರ್ಧಕ ಸಂಘದ ಮುಖವಾಣಿಯಾಗಿ ವಾಗ್ಭೂಷಣ ಎನ್ನುವ ಮಾಸಪತ್ರಿಕೆ 1896ರಿಂದ (ಇಡೀ

ಭರತ ಖಂಡದಲ್ಲಿ ಭಾಷೆ ಮತ್ತು ಸಾಹಿತ್ಯಗಳ ಉನ್ನತಿಗೋಸ್ಕರ ಶ್ರಮಿಸಿದ ಪ್ರಪ್ರಥಮ ಪತ್ರಿಕೆಯಾಗಿತ್ತು) ಕಾರ್ಯಪ್ರವೃತ್ತವಾಯಿತು. 1903ರಲ್ಲಿ ಆಲೂರು ವೆಂಕಟರಾಯರು ಸಭೆಯೊಂದರ ಅಧ್ಯಕ್ಷತೆಯನ್ನು ವಹಿಸಿ ಮದರಾಸು ಮತ್ತು ಉತ್ತರ ಕರ್ನಾಟಕದ ಕನ್ನಡಿಗರನ್ನು ಏಕೀಕರಣಗೊಳಿಸುವ ಬಗ್ಗೆ ಪ್ರಸ್ತಾಪ ಮಾಡಿದರು. 1903ರಲ್ಲಿ ಬೆನಗಲ್ ರಾಮರಾಯರು ಕರ್ನಾಟಕ ಏಕೀಕರಣದ ಕಲ್ಪನೆಯನ್ನು ಮುಂದಿಟ್ಟು ಧಾರವಾಡದಲ್ಲಿ ಒಂದು ಭಾಷಣ ಮಾಡಿದರು. ಅದೇ ರೀತಿ ಕರ್ನಾಟಕ ಭಾಷೋಜ್ಜೀವಿನಿ ಸಭಾ (1887ರಲ್ಲಿ ಮೈಸೂರಿನಿಂದ) ಮತ್ತು ರಾಜಕೀಯ ಪಕ್ಷಗಳಾಗಿದ್ದ ಪ್ರಜಾಪಕ್ಷ, ಪ್ರಜಾಮಿತ್ರ ಮಂಡಳಿ, ಇನ್ನೂ ಮುಂತಾದವುಗಳು ಏಕೀಕರಣ ಪ್ರಕ್ರಿಯೆಯಲ್ಲಿ ನಿರತವಾದವು.

ಕರ್ನಾಟಕ ಇತಿಹಾಸ ಸಂಶೋಧನ ಮಂಡಳಿ: 1914ರಲ್ಲಿ ಆಲೂರು ವೆಂಕಟರಾಯರು ಆರಂಭಿಸಿದ ಈ ಸಂಸ್ಥೆಯ ಮೂಲಕ ಐತಿಹಾಸಿಕ ಸ್ಥಳಗಳ ಮಹತ್ವವನ್ನು ಮನವರಿಕೆ ಮಾಡಿಕೊಡುವ ಕೆಲಸವನ್ನು ಮಾಡಿದರು.

**ಅಖಿಲ ಕರ್ನಾಟಕ ಗ್ರಂಥಕರ್ತರ ವಾರ್ಷಿಕ ಸಮ್ಮೇಳನ, 1907 ( ಧಾರವಾಡ):**

ಕರ್ನಾಟಕ ಏಕೀಕರಣದ (ಭಾಷಾವಾರು ಪ್ರಾಂತ್ಯ) ವಿಚಾರವನ್ನು ಆಲೂರು ವೆಂಕಟರಾಯರು 'ಅಖಿಲ ಕರ್ನಾಟಕ ಗ್ರಂಥಕರ್ತರ ವಾರ್ಷಿಕ ಸಮ್ಮೇಳನ'ದ ಮೂಲಕ ಬುದ್ಧಿಜೀವಿಗಳ ಬೆಂಬಲ ಪಡೆಯಲು ಪ್ರಯತ್ನಿಸಿದರು. ಈ ಸಮ್ಮೇಳನದ ಮೂಲಕ ವಿವಿಧ ಪ್ರದೇಶಗಳ ಸಾಹಿತಿಗಳು ಮತ್ತು ಪ್ರಕಾಶಕರು ಸೇರಿ ಪ್ರತೀ ವರ್ಷವೂ ನಾಡು-ನುಡಿ, ಸಾಹಿತ್ಯ-ಸಂಸ್ಕೃತಿಗಳಿಗೆ ಸಂಬಂಧಿಸಿದ ಪ್ರಕಟಣೆಗಳನ್ನು ಹೊರತರುವುದರ ಬಗ್ಗೆ ಚಿಂತನೆಯನ್ನು ಮಾಡಿದರು. ಈ ಪ್ರಕ್ರಿಯೆಯಲ್ಲಿ ಮೈಸೂರು ಸಂಸ್ಥಾನವನ್ನೂ ತೊಡಗಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ, ಪ್ರಭುತ್ವ ವಿರೋಧಿ ಚಟುವಟಿಕೆಯಾಗುತ್ತದೆ ಎನ್ನುವ ಭಯ ಮೈಸೂರಿನ ಪ್ರಜೆಗಳಿಗೆ ಇದ್ದುದರಿಂದ ಬೆಂಬಲ ಲಭ್ಯವಾಗಲಿಲ್ಲ. ಮೈಸೂರು ಸಂಸ್ಥಾನದಲ್ಲಿ ಪೂರಕವಾದ ಬೆಂಬಲ ಸಿಗದೇ ಹೋದರೂ ಧಾರವಾಡವನ್ನು ಕೇಂದ್ರವಾಗಿಸಿಕೊಂಡು ಕೆಲವೇ ಕೆಲವು ಜನ (ವಿದ್ಯಾವಂತರು ಮತ್ತು ಬುದ್ಧಿಜೀವಿಗಳು ತಿಲಕರ ಅನುಯಾಯಿಗಳಾಗಿದ್ದರು ಇಲ್ಲವೆ, ಕಾಂಗ್ರೆಸ್ಸಿಗರಾಗಿದ್ದರು) ಏಕೀಕರಣ ಪ್ರಕ್ರಿಯೆಗೆ ಬೆಂಬಲವನ್ನು ವ್ಯಕ್ತಪಡಿಸಿದರು. ಜೊತೆಗೆ, ಪ್ರತೀ ವರ್ಷವೂ ಸಮ್ಮೇಳನವನ್ನು ವ್ಯವಸ್ಥೆಗೊಳಿಸಲು ತೀರ್ಮಾನಿಸಿದರು. ಫಲವಾಗಿ, 2ನೇ ಸಮ್ಮೇಳನ, 1908 (ಧಾರವಾಡ) ಮತ್ತು 3ನೇ ಸಮ್ಮೇಳನ, 1909 (ಬೆಂಗಳೂರಿನ ಕೋಟೆ ಪ್ರೌಢಶಾಲೆ) ಗಳನ್ನು ವ್ಯವಸ್ಥೆಗೊಳಿಸಲಾಯಿತು. ಈ ರೀತಿಯ ಚಟುವಟಿಕೆಗಳ ಫಲವೇ, 5ನೇ ಮೇ 1915ರಲ್ಲಿ ಹುಟ್ಟನ್ನು ಕಂಡುಕೊಂಡ ಕರ್ನಾಟಕ (ಕನ್ನಡ) ಸಾಹಿತ್ಯ ಪರಿಷತ್ತು.

**ಕರ್ನಾಟಕ ಸಭಾ (ಕರ್ನಾಟಕ ಏಕೀಕರಣ ಸಭಾ / ಸಂಘ), ಧಾರವಾಡ -1917:**

ಕರ್ನಾಟಕ ಏಕೀಕರಣದ (ಭಾಷಾವಾರು ಪ್ರಾಂತ್ಯ) ವಿಚಾರದಲ್ಲಿ ಆಲೂರು ವೆಂಕಟರಾಯರು ಮತ್ತು ಅವರ ಬೆಂಬಲಿಗರ ಆಶಯದಂತೆ ಕರ್ನಾಟಕ ಸಾಹಿತ್ಯ ಪರಿಷತ್ತು (ಮಹಾರಾಜರ ಕೃಪಾಕಟಾಕ್ಷದಲ್ಲಿ ಇದ್ದುದರಿಂದ) ಪ್ರತಿಕ್ರಿಯಿಸಲಿಲ್ಲ. ಆಗ ಆಲೂರು ವೆಂಕಟರಾಯರು ಮತ್ತು ಅವರ ಸಂಗಡಿಗರು (ಮುದವೀಡು ಕೃಷ್ಣರಾಯ, ಕಡಪ ರಾಘವೇಂದ್ರರಾಯರು) ಸೇರಿಕೊಂಡು 1917ರಲ್ಲಿ ಕರ್ನಾಟಕ ಸಭಾವನ್ನು (ಗದಿಗಯ್ಯ ಹೊನ್ನಾಪುರ ಮಠ ಅವರ ಮನೆಯಲ್ಲಿ) ಹುಟ್ಟುಹಾಕಿದರು. ಆಗ ಇವರು ಮಾಂಟೆಗ್ಯು-ಚೆಲ್ಸ್‌ಫರ್ಡ್ ಆಯೋಗಕ್ಕೆ 1 ಲಕ್ಷ ಕನ್ನಡಿಗರ ಸಹಿಯನ್ನು ಮಾಡಿಸಿದ ಕರ್ನಾಟಕ ಏಕೀಕರಣ ಮನವಿ (ದೇಶೀಯ ಸಂಸ್ಥಾನಗಳನ್ನು ಹೊರತುಪಡಿಸಿ) ಯನ್ನು ಸಲ್ಲಿಸುವಲ್ಲಿ

ಯಶಸ್ವಿಯಾಗಿದ್ದರು.

**ಬೆಳಗಾವಿ ಅಧಿವೇಶನ – 1924:**

ಮಹಾತ್ಮ ಗಾಂಧಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನಕ್ಕೆ ಕನ್ನಡಿಗರೆಲ್ಲಾ ಒಂದೆಡೆ ಸೇರುವ ಅವಕಾಶ ಲಭ್ಯವಾಯಿತು. ಆಗ ಅವರುಗಳು ತಮ್ಮೆಲ್ಲಾ ಭಿನ್ನಾಭಿಪ್ರಾಯಗಳನ್ನು ಮರೆತು ಒಂದೆಡೆ ಸೇರಿದರು. ಇದು ಸಹಜವಾಗಿಯೇ, ಕರ್ನಾಟಕ ಏಕೀಕರಣಕ್ಕೆ ಪರೋಕ್ಷವಾಗಿ ಪ್ರೇರಣೆಯನ್ನು ನೀಡಿತು. ಜೊತೆಗೆ, ಬೆಳಗಾವಿಯ ಅಧಿವೇಶನದ ಸಂದರ್ಭದಲ್ಲಿಯೇ, ಕರ್ನಾಟಕ ಏಕೀಕರಣ ಸಂಘವನ್ನು ಸ್ಥಾಪಿಸುವ ನಿರ್ಣಯವನ್ನು ಕೈಗೊಂಡು ಆರಂಭಿಸಿದರು. ಹುಯಿಲಗೋಳ ನಾರಾಯಣರಾಯರು 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎನ್ನುವ ಗೀತೆಯನ್ನು ಮೊದಲ ಸಲ ಹಾಡುವುದರ ಮೂಲಕ ಏಕೀಕರಣ ಚಳುವಳಿಗೆ ಚೇತನವನ್ನು ನೀಡಿದರು. ವೀಣೆ ಶೇಷಣ್ಣನವರಿಂದ ಕರ್ನಾಟಕ ಸಂಗೀತದ ಕಛೇರಿಯನ್ನು ವ್ಯವಸ್ಥೆಗೊಳಿಸಲಾಗಿತ್ತು.

**ವಿಜಯನಗರ ಷಟ್ ಶತಮಾನೋತ್ಸವ– 1936:**

ಏಕೀಕರಣ ಚಳುವಳಿಯನ್ನು ಶಕ್ತಿಯುತಗೊಳಿಸಲು ವಿಜಯನಗರ ಸ್ಥಾಪನೆಯಾಗಿ 600 ವರ್ಷಗಳು ಕಳೆದುದರ ಸವಿನೆನಪಿಗಾಗಿ ಈ ಕಾರ್ಯಕ್ರಮವನ್ನು 3 ದಿನಗಳ ಕಾಲ ಆಚರಿಸಿದ ಕಾರ್ಯಕ್ರಮಕ್ಕೆ ಸು. 40,000 ಕನ್ನಡಿಗರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಕರ್ನಾಟಕದ ಗತವೈಭವವನ್ನು ಪರಿಚಯಿಸುವ ಸ್ಮರಣ ಸಂಚಿಕೆಯನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಹೊರತರಲಾಯಿತು.

**ಕರ್ನಾಟಕ ಏಕೀಕರಣ ಸಮ್ಮೇಳನ, ಕಾಸರಗೋಡು – 1947:**

ಕಾಸರಗೋಡಿನಲ್ಲಿ ಕರ್ನಾಟಕ ಏಕೀಕರಣ ಸಮ್ಮೇಳನವನ್ನು ವ್ಯವಸ್ಥೆಗೊಳಿಸಲಾಯಿತು. ಆಗ, ದಕ್ಷಿಣ ಕನ್ನಡ ಜಿಲ್ಲೆಯನ್ನು ತಮ್ಮ ರಾಜ್ಯಕ್ಕೆ ಸೇರಿಸಬೇಕು ಎನ್ನುವ ಒತ್ತಡವನ್ನು ಹಾಕುತ್ತಿದ್ದ ಕೇರಳದವರಿಗೆ ಈ ಸಮ್ಮೇಳನದ (ಕಾಸರಗೋಡು – ಡಿಸೆಂಬರ್ 1947) ಮೂಲಕ ಪ್ರತ್ಯುತ್ತರವನ್ನು ನೀಡಿದ್ದಲ್ಲದೆ, ಕೇಂದ್ರ ಸರಕಾರದ ಮೇಲೂ ಒತ್ತಡವನ್ನು ಹಾಕಲಾಯಿತು. ಕೇಂದ್ರ ಸರಕಾರ ಏಕೀಕರಣದ ವಿಚಾರದಲ್ಲಿ ಅನುಸರಿಸುತ್ತಿರುವ ವಿಳಂಬ ನೀತಿಯನ್ನು ಕುರಿತು ತೀವ್ರವಾದ ನಿರಾಶೆ ಮತ್ತು ಅಸಮಾಧಾನವನ್ನು ಸಮ್ಮೇಳನ ವ್ಯಕ್ತಪಡಿಸಿತು. ಎಸ್. ನಿಜಲಿಂಗಪ್ಪನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಗೆ ದೆಹಲಿಯಲ್ಲಿದ್ದ ಗಾಂಧೀಜಿ ಮತ್ತು ಇತರೇ ನಾಯಕರಿಗೆ ಕರ್ನಾಟಕ ಏಕೀಕರಣದ ಅವಶ್ಯಕತೆಯನ್ನು ಮನವರಿಕೆ ಮಾಡಿಕೊಡುವ ಜವಾಬ್ದಾರಿಯನ್ನು ನೀಡಿತು.

**ಎಸ್. ಕೆ. ದಾರ್ ಸಮಿತಿ, 1948:**

ಭಾರತ ಸ್ವತಂತ್ರಗೊಂಡ ನಂತರ ಎಸ್. ಕೆ. ದಾರ್ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಯಿತು. ಈ ಸಮಿತಿಯು ಒಂದು ಸಾವಿರಕ್ಕೂ ಅಧಿಕ ಸಂಖ್ಯೆಯ ಮನವಿಗಳನ್ನು ಸ್ವೀಕರಿಸಿತು. 700ಕ್ಕೂ ಅಧಿಕ ಜನರ ಅಹವಾಲುಗಳನ್ನು ಸಾಕ್ಷಿಗಳ ರೂಪದಲ್ಲಿ ಪಡೆಯಿತು. ಆದರೆ, ತನ್ನ ವರದಿಯಲ್ಲಿ ಭಾಷಾವಾರು ಪ್ರಾಂತ್ಯಗಳನ್ನು ರಚನೆ ಮಾಡಕೂಡದು (ದೇಶದ ಏಕತೆಗೆ ಧಕ್ಕೆ ಉಂಟಾಗುತ್ತದೆ ಎನ್ನುವ ಕಾರಣವನ್ನು ನೀಡಿ) ಎನ್ನುವ ವರದಿಯನ್ನು ನೀಡಿತು. ಮೈಸೂರು ಸಂಸ್ಥಾನ ಕರ್ನಾಟಕವನ್ನು ಸೇರಲು ಇನ್ನೂ ಸಿದ್ಧವಿಲ್ಲ ಎನ್ನುವ ಅಂಶವನ್ನು ಉಲ್ಲೇಖಿಸಿತು. ಮೈಸೂರು ಸಂಸ್ಥಾನವನ್ನು ಕರ್ನಾಟಕದಿಂದ ಹೊರಗಿಟ್ಟು ರಚನೆಯಾಗುವ

ಕರ್ನಾಟಕವನ್ನು ಸೇರಲು ಕೊಡಗು ತಯಾರಿಲ್ಲ ಎನ್ನುವ ಅಂಶವನ್ನು ವರದಿ ಉಲ್ಲೇಖಿಸಿತು.

**ಜೆ.ವಿ.ಪಿ. ಸಮಿತಿ, 1948:**

ಏಕೀಕರಣ ಹೋರಾಟಗಾರರ (ದಕ್ಷಿಣ ರಾಜ್ಯಗಳ) ಟೀಕೆ–ಟಿಪ್ಪಣಿಗಳನ್ನು ಗಮನಿಸಿದ ಸರಕಾರ 1948ರಲ್ಲಿ ವ್ಯವಸ್ಥೆಗೊಳಿಸಿದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನದಲ್ಲಿ (ಜೈಪುರ) ಜೆ.ವಿ.ಪಿ. ಸಮಿತಿಯನ್ನು ರಚಿಸುವ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು. ಜವಹರಲಾಲ್ ನೆಹರು, ವಲ್ಲಭ ಭಾಯ್ ಪಟೇಲ್ ಮತ್ತು ಪಟ್ಟಾಭಿ ಸೀತಾರಾಮಯ್ಯನವರು ಈ ಸಮಿತಿಯ ಸದಸ್ಯರಾಗಿದ್ದರು. ಸಮಿತಿ ವರದಿಯನ್ನು ಮಾರ್ಚ್ 1949ರಲ್ಲಿ ಸಲ್ಲಿಸಿತು. ವರದಿಯಲ್ಲಿ, ಆಂಧ್ರದ ರಚನೆಗೆ ಒಪ್ಪಿಗೆಯನ್ನು ಸೂಚಿಸಿತು. ಆದರೆ, ಕರ್ನಾಟಕದ ರಚನೆಯ (ಭಾಷಾವಾರು ರಾಜ್ಯ ರಚನೆ) ವಿಚಾರವನ್ನು ತಳ್ಳಿಹಾಕಿತ್ತು (ರಾಷ್ಟ್ರೀಯ ಸಮಸ್ಯೆಗಳತ್ತ ಗಮನಹರಿಸಬೇಕಾಗಿರುವುದರಿಂದ, ಭಾಷಾವಾರು ಪ್ರಾಂತ್ಯ ರಚನೆಯ ವಿಚಾರಕ್ಕೆ ಸಮಯ ಇನ್ನೂ ಪರಿಪಕ್ವವಾಗಿಲ್ಲ ಎನ್ನುವ ನಿಲುವನ್ನು ತಾಳಿತ್ತು). ಜೆ.ವಿ.ಪಿ, ಸಮಿತಿಯ ವರದಿಯನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಅಂಗೀಕರಿಸಿತು. ಫಲವಾಗಿ, ಕಾಂಗ್ರೆಸ್ ಕನ್ನಡಿಗರ ಆಕ್ರೋಶಕ್ಕೆ ತುತ್ತಾಗಬೇಕಾಯಿತು. ಅಲ್ಲದೆ, ಸ್ಥಳೀಯ (ಕೆಪಿಸಿಸಿ) ಕಾಂಗ್ರೆಸ್ಸಿಗರು ಸಂದಿಗ್ಧತೆಯ ಸ್ಥಿತಿಯನ್ನು (ಕೇಂದ್ರದ ಕಾಂಗ್ರೆಸ್ ನಾಯಕರ ಮರ್ಜಿಗೆ ಒಳಗಾಗಿ ನಿರ್ಲಿಪ್ತರಾಗಿರಬೇಕಾದ ಸ್ಥಿತಿ ಬಂದೊದಗಿತು) ಅನುಭವಿಸಿದರು. ಆಗ ಕೆಲವು ಶಾಸಕರು ರಾಜೀನಾಮೆ ಪತ್ರವನ್ನು ಕೆಪಿಸಿಸಿಗೆ ಸಲ್ಲಿಸಿದರು.

**ಪೊಟ್ಟಿ ಶ್ರೀರಾಮುಲುರವರ ಆಮರಣಾಂತ ಉಪವಾಸ ಸತ್ಯಾಗ್ರಹ, 1952:**

ಕೇಂದ್ರ ಸರಕಾರದ ಅದರಲ್ಲೂ ಜವಹರಲಾಲ್ ನೆಹರೂರವರ ಹಟಮಾರಿತನದ ಧೋರಣೆಯಿಂದ (ನೆಹರು ಕಾಂಗ್ರೆಸ್ ಸದಸ್ಯರಿಗೆ ವಿಪ್ ನೀಡಿ ಸಂಸತ್ತಿನಲ್ಲಿ ಈ ವಿಚಾರ ತಿರಸ್ಕೃತವಾಗುವಂತೆ ನೋಡಿಕೊಳ್ಳುತ್ತಿದ್ದರು) ಬೇಸತ್ತ ಪೊಟ್ಟಿ ಶ್ರೀರಾಮುಲು ಆಮರಣಾಂತ ಉಪವಾಸ ಸತ್ಯಾಗ್ರಹವನ್ನು 19.10.1952 ರಲ್ಲಿ ಆರಂಭಿಸಿದರು. ಸತತವಾಗಿ 58 ದಿನಗಳ ಉಪವಾಸ ಸತ್ಯಾಗ್ರಹದ (ನೆಹರು ನಡೆಸಿದ ಸಂಧಾನ ವಿಫಲವಾಯಿತು) ತರುವಾಯ ಸಾವನ್ನಪ್ಪಿದರು. ಆಗ ಘಟಿಸಿದ ಹಿಂಸಾತ್ಮಕ ಕೃತ್ಯಗಳ ತರುವಾಯ ಆಂಧ್ರ ಪ್ರದೇಶದ ರಚನೆಗೆ ಕೇಂದ್ರ ಸರಕಾರ ಒಪ್ಪಿಗೆಯನ್ನು ನೀಡಿತು.

**ಕೆಪಿಸಿಸಿಯ ವಿಶೇಷ ಸಭೆ, ಹುಬ್ಬಳ್ಳಿ, 19, 20ನೇ ಏಪ್ರಿಲ್ 1953:**

ಶಂಕರಗೌಡ ಪಾಟೀಲರು ಉಪವಾಸ ಸತ್ಯಾಗ್ರಹವನ್ನು ಆರಂಭಿಸಿ 23 ದಿನಗಳಾಗಿದ್ದವು. 1954ರ ಅಂತ್ಯದೊಳಗೆ ಕರ್ನಾಟಕ ರಾಜ್ಯವನ್ನು ರಚಿಸಲೇಬೇಕು. ಈ ವಿಚಾರವನ್ನು ಕುರಿತು ಅಕ್ಟೋಬರ್ 1953ರ ಒಳಗೆ ಭಾರತ ಸರಕಾರ ಸ್ಪಷ್ಟವಾದ ಘೋಷಣೆಯನ್ನು ಮಾಡದಿದ್ದರೆ, ಶಾಸನ ಮಂಡಳಿ ಮತ್ತು ಪಾರ್ಲಿಮೆಂಟಿನಲ್ಲಿರುವ ಕರ್ನಾಟಕದ ಶಾಸಕರು ತಮ್ಮ ಸ್ಥಾನಗಳಿಗೆ ರಾಜೀನಾಮೆಯನ್ನು ನೀಡುವರು ಎನ್ನುವ ನಿರ್ಣಯವನ್ನು ಕೈಗೊಳ್ಳಲಾಯಿತು. ಈ ಹಿನ್ನೆಲೆಯಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಕೆಪಿಸಿಸಿಯ ವಿಶೇಷ ಸಭೆಯನ್ನು ಏಕೀಕರಣದ ಚಳುವಳಿಯಲ್ಲಿ (ಸು. 25 ಸಾವಿರ ಕನ್ನಡಿಗರು ಸೇರಿದ್ದರು) ಒಂದು ನಿರ್ಣಾಯಕ ತಿರುವು ಎಂದು ಹೇಳಲಾಗಿದೆ.

**ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು (ಅಕರಾನಿ ಪರಿಷತ್ತು):**

ಅಳವಂಡಿ ಶಿವಮೂರ್ತಿ ಸ್ವಾಮಿ, ಕೆ.ಆರ್. ಕಾರಂತ, ಶಾಂತವೇರಿ ಗೋಪಾಲಗೌಡ,

ಬಿ.ಎ. ಕಕ್ಕಿಲಾಯ, ಇನ್ನೂ ಮುಂತಾದ ಸಮಾಜವಾದಿ ನಾಯಕರು ಕಾಂಗ್ರೆಸ್ಸಿನ ನಂಬಿಕೆ ದ್ರೋಹ ಮತ್ತು ಸಮಯ ಸಾಧಕತನವನ್ನು ಅಕರಾನಿ ಪರಿಷತ್ತಿನ ಅಡಿಯಲ್ಲಿ ಪ್ರಚಾರ ಮಾಡುವುದರ ಮೂಲಕ ಚಳುವಳಿ ತೀವ್ರ ರೂಪವನ್ನು ಪಡೆಯಲು ಕಾರಣರಾದರು. ಇದೇ ಸಂದರ್ಭದಲ್ಲಿ ನಡೆದ ಉಪಚುನಾವಣೆ (ಆಗಸ್ಟ್ 1953) ಯಲ್ಲಿ (ಹುಬ್ಬಳ್ಳಿಯಿಂದ ಮುಂಬೈ ಶಾಸನ ಸಭೆಗೆ) ಏಕೀಕರಣ ಪಕ್ಷದ ಅಭ್ಯರ್ಥಿ ಕಾಂಗ್ರೆಸ್ ಅಭ್ಯರ್ಥಿಯ ವಿರುದ್ಧ ಅತ್ಯಧಿಕ ಮತಗಳಿಂದ ಜಯಶಾಲಿಯಾದರು. ಉಪ ಚುನಾವಣೆಯ ಫಲಿತಾಂಶದ ನಂತರ ಅಳವಂಡಿ ಶಿವಮೂರ್ತಿ ಸ್ವಾಮಿ ಮತ್ತು ಕೆ. ಆರ್. ಕಾರಂತರು ದೆಹಲಿಗೆ ತೆರಳಿ ನೆಹರು ಜೊತೆ ಮಾತುಕತೆಯನ್ನು ಮಾಡಿ ಬರಿಗೈಯಲ್ಲಿ ಹಿಂದಿರುಗಿದರು. ಆಗ ಚಳುವಳಿ ಇನ್ನೂ ತೀವ್ರವಾದ ರೂಪವನ್ನು ತಾಳಿತು. 1953 ಸೆಪ್ಟೆಂಬರ್ ತಿಂಗಳ ಮೊದಲ ವಾರವನ್ನು 'ಕರ್ನಾಟಕ ವಾರ'ವೆಂದು ಆಚರಿಸಲು ಕರೆ ನೀಡಿದರು. ಇದಕ್ಕೆ ಎಲ್ಲಿಲ್ಲದ ಪ್ರತಿಕ್ರಿಯೆ ಇಡೀ ನಾಡಿನಾದ್ಯಂತ (ಮುಂಬೈ, ಹೈದರಾಬಾದ್ ಮತ್ತು ಮದ್ರಾಸ್ ಕನ್ನಡ ಪ್ರಾಂತ್ಯಗಳು) ಅಭಿವ್ಯಕ್ತವಾಯಿತು. ಎಲ್ಲಾ ವರ್ಗದ ಜನರು ಈ ಚಳುವಳಿಯಲ್ಲಿ ಭಾಗವಹಿಸಿದ್ದರು. ಆಗ ರೈಲ್ವೆ ಹಳಿಗಳನ್ನು ತಪ್ಪಿಸುವ, ದೂರವಾಣಿ ತಂತಿಗಳನ್ನು ತುಂಡರಿಸುವ ದುಷ್ಕೃತ್ಯಗಳು ಜರುಗಿದವು.

**ಫಜಲ್ ಅಲಿ ಆಯೋಗ, 1953 (ಎಸ್. ಆರ್ ಸಿ – ರಾಜ್ಯ ಪುನರ್ ವಿಂಗಡನಾ ಆಯೋಗ):**

ರಾಜ್ಯಗಳನ್ನು ಪುನರ್ ವಿಂಗಡಣೆ ಮಾಡುವ ಉದ್ದೇಶದಿಂದ ಫಜಲ್ ಅಲಿಯವರ ನೇತೃತ್ವದಲ್ಲಿ 29ನೇ ಡಿಸೆಂಬರ್ 1953ರಲ್ಲಿ ಆಯೋಗವೊಂದನ್ನು ರಚಿಸಲಾಯಿತು. ಹೃದಯ್ನಾಥ್ ಕುಂಜ್ರು ಮತ್ತು ಕೆ.ಎಮ್ ಪಣ್ಣಿಕ್ಕರ್ ಇದರ ಸದಸ್ಯರುಗಳಾಗಿದ್ದರು. ಈ ಸಮಿತಿ 38 ಸಾವಿರ ಮೈಲಿಗಿಂತಲೂ ಅಧಿಕ ಪ್ರಮಾಣದಲ್ಲಿ ಪ್ರವಾಸವನ್ನು ಮಾಡಿ, 9 ಸಾವಿರಕ್ಕಿಂತಲೂ ಅಧಿಕ ಪ್ರಮಾಣದ ಕನ್ನಡಿಗರ ಸಂಗಡ ಚರ್ಚಿಸಿ, ಒಂದೂವರೆ ಲಕ್ಷಕ್ಕಿಂತಲೂ ಹೆಚ್ಚು ಮನವಿಗಳನ್ನು ಸ್ವೀಕರಿಸಿತ್ತು. ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರು ಉತ್ತರ ಕರ್ನಾಟಕದಾದ್ಯಂತ ಸಂಚರಿಸಿ ತಾನು ಏಕೀಕರಣದ ಬೆಂಬಲಿಗ ಎನ್ನುವ ಸಂದೇಶವನ್ನು ಸಾರಿ ಹಿಂದಿರುಗಿದರು. ಫಜಲ್ ಅಲಿ ಆಯೋಗವು ಕಾಸರಗೋಡನ್ನು ಕೇರಳಕ್ಕೆ, ಸೊಲ್ಲಾಪುರವನ್ನು ಮಹಾರಾಷ್ಟ್ರಕ್ಕೆ ನೀಡುವುದರ ಮೂಲಕ ತನ್ನ ವರದಿಯನ್ನು ಸಲ್ಲಿಸಿತು. ಫಜಲ್ ಅಲಿ ವರದಿಯನ್ನು ಕುರಿತು ಶಾಸನ (ವಿಧಾನ) ಸಭೆಯಲ್ಲಿ ಔಪಚಾರಿಕವಾಗಿ ಚರ್ಚಿಸಿ ಮತಕ್ಕೆ ಹಾಕಿದಾಗ 60 ಸದಸ್ಯರು ಭಾಗವಹಿಸಿದ್ದರು. ಅವರಲ್ಲಿ 35 ಸದಸ್ಯರು ತಟಸ್ಥರಾಗಿದ್ದರೆ, 03 ಸದಸ್ಯರು ವಿರುದ್ಧವಾಗಿ ಮತ ಚಲಾಯಿಸಿದರು. ಒಟ್ಟಾರೆ, ಶಾಸನ ಸಭೆ ಮತ್ತು ವಿಧಾನಮಂಡಲದಲ್ಲಿ ಗೊತ್ತುವಳಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಬೆಂಗಳೂರು, ತುಮಕೂರು ಮತ್ತು ಮಂಡ್ಯಗಳಲ್ಲಿ ಏಕೀಕರಣಕ್ಕೆ ತೀವ್ರವಾದ ವಿರೋಧ ಅಭಿವ್ಯಕ್ತವಾಯಿತು. ಆದರೂ ಸಂಸತ್ತು ಮತ್ತು ರಾಷ್ಟ್ರಪತಿಗಳ (31ನೇ ಆಗಸ್ಟ್ 1956) ಅನುಮೋದನೆಯೊಂದಿಗೆ 1ನೇ ನವೆಂಬರ್ 1956ರಲ್ಲಿ ಏಕೀಕೃತ ಮೈಸೂರು ರಾಜ್ಯ (ಮೈಸೂರು ಸಂಸ್ಥಾನದವರನ್ನು ಸಂತೈಸುವ ಉದ್ದೇಶದಿಂದಲೋ ಎನ್ನುವಂತೆ, ಏಕೀಕೃತ ಕರ್ನಾಟಕಕ್ಕೆ ಮೈಸೂರು ರಾಜ್ಯವೆಂದು ನಾಮಕರಣ ಮಾಡಲಾಗಿತ್ತು) ಎನ್ನುವ ಹೆಸರಿನೊಂದಿಗೆ ತನ್ನ ಹುಟ್ಟನ್ನು ಕಂಡುಕೊಂಡಿತು. ಹೊಸ ರಾಜ್ಯ ಉದಯವಾಗುವ ಮುನ್ನವೇ ಕೆಂಗಲ್ ಹನುಮಂತಯ್ಯನವರು (ಏಕೀಕರಣದ ವಿಷಯದಲ್ಲಿ ಹನುಮಂತಯ್ಯನವರು ಕೈಗೊಂಡ ತೀರ್ಮಾನಗಳಿಂದ ಕೆಲವರಿಂದ ಅಪ್ರಿಯತೆಗೆ ಒಳಗಾಗಿದ್ದರು) ಮುಖ್ಯಮಂತ್ರಿಯ ಸ್ಥಾನವನ್ನು ತ್ಯಜಿಸಬೇಕಾಯಿತು.

**ಸಮಾರೋಪ:**

ಕರ್ನಾಟಕದಲ್ಲಿ ಏಕೀಕರಣ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದ ಮಹನೀಯರುಗಳ ಶ್ರಮ, ದುಡಿಮೆ, ಮತ್ತು ದೃಢವಾದ ನಿಲುವಿನ ಫಲ 1956ರ ಕರ್ನಾಟಕದ ಏಕೀಕರಣವೆಂದು ಹೇಳಬಹುದು. ಆಲೂರು ವೆಂಕಟರಾಯರು ಮಾಡಿದ ಪರಿಶ್ರಮದ ಫಲವಾಗಿ, ಅವರನ್ನು 'ಕರ್ನಾಟಕ ಕುಲ ಪುರೋಹಿತ' ಎನ್ನುವ ಬಿರುದನ್ನು ನೀಡಿ ಗೌರವಿಸಲಾಯಿತು. ಬರವಣಿಗೆಗಳ ಮೂಲಕ ಏಕೀಕರಣದ ಕಿಡಿಯನ್ನು ಹತ್ತಿಸಿದ ಬೇಂದ್ರೆ, ಕುವೆಂಪು, ಗೋವಿಂದ ಪೈ, ಬಿ.ಎಂ. ಶ್ರೀ, ಹುಯಿಲುಗೋಳ ನಾರಾಯಣರಾವ್ ಅವರವರುಗಳನ್ನು ನೆನೆಯಲೇಬೇಕು. ಡಿ. ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗ ಅಂದರೆ, 1ನೇ ನವೆಂಬರ್ 1973ರಲ್ಲಿ ಮೈಸೂರು ರಾಜ್ಯವನ್ನು ಕರ್ನಾಟಕ ರಾಜ್ಯವೆಂದು ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿಯಲ್ಲಿ ದೀಪ ಬೆಳಗುವ ಮೂಲಕ ಮರು ನಾಮಕರಣ ಮಾಡಿದರು.

**ಪರಾಮರ್ಶನ ಗ್ರಂಥಗಳು:**


1. ಬಿ. ಷೇಕ್ ಅಲಿ (ಪ್ರ.ಸಂ) ಮತ್ತು ಪ್ರೊ ಎಸ್ ಚಂದ್ರಶೇಖರ್ (ಸಂ) : ಕರ್ನಾಟಕ ಚರಿತ್ರೆ, ಸಂಪುಟ–7, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ವಿಜಯ್ ಪೂಣಚ್ಚ ತಂಬಂಡ (ಸಂ) : ಭಾರತ ಉಪಖಂಡದ ಆಧುನಿಕ ಚರಿತ್ರೆ, ಸಂಪುಟ–3, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಶಂಕರ್ ನಾರಾಯಣರಾವ್ ಎನ್.ಪಿ : ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು, ನವ ಕರ್ನಾಟಕ ಪ್ರಕಾಶನ, ಬೆಂಗಳೂರು.
4. ಎಚ್.ಎಸ್. ಗೋಪಾಲರಾವ್ : ಆಧುನಿಕ ಭಾರತ ಇತಿಹಾಸ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು.
5. ಬಸವರಾಜ ಎನ್ ಅಕ್ಕಿ : ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ, ಸೋಮೇಶ್ವರ ಪಬ್ಲಿಕೇಶನ್ಸ್, ಧಾರವಾಡ.
6. ಬಾ.ರಾ. ಗೋಪಾಲ್ : ಕರ್ನಾಟಕ ಇತಿಹಾಸ – ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.